ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಈಜಿಪುರ ಪ್ರದೇಶವು 1996ರ ಹಿಂದೆ ರೆವಿನ್ಯೂ ಬಡಾವಣೆಯಾಗಿದ್ದು, ಈ ಪ್ರದೇಶವು ಅಡ್ಡಾದಿಡ್ಡಿಯಾಗಿ ಬಳೆದ ನಾಗರೀಕ ಸೌಲಭ್ಯಗಳಿಂದ ವಂಚಿತವಾದ ಪ್ರದೇಶವಾಗಿತ್ತು. ಇದು ತಗ್ಗು ಪ್ರದೇಶದಿಂದ ಕೂಡಿದೆ. ಈ ಎಲ್ಲಾ ಕಾರಣಗಳಿಂದ, ಈ ಪ್ರದೇಶವನ್ನು ವ್ಯವಸ್ಥಿತವಾಗಿ ಅಭಿವೃದ್ಧಿ ಪಡಿಸಲಾಗಿರುವುದಿಲ್ಲ.

ಇ) ಬೆಂಗಳೂರು ಮಹಾನಗರ ಪಾಲಿಕೆಯು ಈ ಪ್ರದೇಶಕ್ಕೆ ಈಗಾಗಲೇ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ, ಹಾಲಿ ಇದ್ದ ಕಚ್ಚಾರಸ್ತೆಗಳನ್ನು ರಸ್ತೆ ಬದಿಯ ಚರಂಡಿ ಮತ್ತು ಅಡಿಗಾಲುವೆಗಳೊಂದಿಗೆ ಮೆಟಲಿಂಗ್ ರಸ್ತೆಗಳನ್ನಾಗಿ ಮಾಡುವ ಕೆಲಸಗಳನ್ನು ಕೈಗೊಳ್ಳಲಾಗಿದೆ. ಮತ್ತು ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಗಳನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮೂಲಕ ಹಂತಹಂತವಾಗಿ ತೆಗೆದುಕೊಳ್ಳಲಾಗುತ್ತಿದೆ. ಅಲ್ಲದೆ, ಅನೇಕ ಸೇತುವೆಗಳನ್ನು ಸಹ ನಿರ್ಮಿಸಲಾಗಿದೆ. ಆದರೆ, ಸ್ವಾಧೀನ ಪಡಿಸಿಕೊಳ್ಳಲು ಮತ್ತು ಆಟದ ಮೈದಾನ ಮತ್ತು ಉದ್ಯಾನವನ, ಮತ್ತಿತರೆ ಸೌಲಭ್ಯಗಳನ್ನು ಒದಗಿಸಲುಯಾವುದೇ ಖಾಲಿ ಜಾಗಗಳು ಲಭ್ಯವಿರುವುದಿಲ್ಲ.

ಸರ್ಕಾರಿ ನೌಕರರು ಪತ್ರಿಕಾ ವರದಿಗಾರರಾಗಿ ಕೆಲಸ ಮಾಡುವುದರ ಬಗ್ಗೆ

2668 (3198) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರಪೇಟೆ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ನೌಕರರು ಪತ್ರಿಕಾ ವರದಿಗಾರರಾಗಿ ಕೆಲಸ ಮಾಡಬಹುದೇ;

ಆ) ಸರ್ಕಾರದಿಂದ ಅವರು ಪರವಾನಿಗೆ ಪಡೆದಿರುತ್ತಾರೆಯೇ;

ಇ) ಯಾವ ಆಧಾರದ ಮೇಲೆ ಅವರಿಗೆ ಪರವಾನಿಗೆ ಕೊಡಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ(ಮುಖ್ಯ ಮಂತ್ರಿಗಳು) :

ಅ) ಇಲ್ಲಾ

ಆ) ಮತ್ತು ಇ) ಐಟಂ (ಅ) ಗೆ ನೀಡಿದ ಉತ್ತರದ ಹಿನ್ನೆಲೆಯಲ್ಲಿ, ಇದು ಉದ್ಭವಿಸುವುದಿಲ್ಲ.

ಕೆ.ಇ.ಬಿ. ಮೀಟರ್ ಬೋರ್ಡುಗಳ ಅಭಾವ

2669 (3199) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಸೋಮವಾರ ಪೇಟೆ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಇ.ಬಿ. ಮೀಟರ್ ಬೋರ್ಡ್‌ನ ಅಭಾವ ಉಂಟಾಗಲು ಕಾರಣವೇನು;

ಆ) ಕೊಡಗು ಜಿಲ್ಲೆಗೆ ಎಷ್ಟು ಮೀಟರ್ ಬೋರ್ಡ್ ಮಂಜೂರು ಮಾಡಲಾಗಿದೆ;